**ಮೂಡಿಗೆರೆ ಕ್ಷೇತ್ರಕ್ಕೆ ಸೇರಿದ ಮೂಡಿಗೆರೆ, ಬಣಕಲ್, ಕಳಸ ಜೂನಿಯರ್ ಕಾಲೇಜುಗಳ ಪ್ರಿನ್ಸಿಪಾಲರ ಹುದ್ದೆ ಖಾಲಿ ಇರುವ ಬಗ್ಗೆ.**

2822 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೂಡಿಗೆರೆ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಮೂಡಿಗೆರೆ , ಬಣಕಲ್, ಕಳಸ ಜೂನಿಯರ್ ಕಾಲೇಜುಗಳಲ್ಲಿ ಎಷ್ಟು ವರ್ಷಗಳಿಂದ ಪ್ರಿನ್ಸಿಪಾಲರ ಹುದ್ದೆ ಖಾಲಿ ಇರುವುದು?*

*ಆ) ಇದುವರೆವಿಗೂ ಆ ಪ್ರಿನ್ಸಿಪಾಲರುಗಳ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನು?*

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 1) ಸರ್ಕಾರಿ ಪದವಿ ಪೂರ್ವ ಕಾಲೇಜು ಮೂಡಿಗೆರೆಯಲ್ಲಿ ದಿನಾಂಕ 28-05-1990ರಿಂದ ಖಾಲಿಯಿರುತ್ತದೆ

2) ಸರ್ಕಾರಿ ಪದವಿ ಪೂರ್ವ ಕಾಲೇಜು, ಬಣಕಲ್‌ನಲ್ಲಿ ದಿನಾಂಕ 07-12-1987ರಿಂದ ಖಾಲಿ ಇರುತ್ತದೆ.

3) ಸರ್ಕಾರಿ ಪದವಿ ಪೂರ್ವ ಕಾಲೇಜು ಕಳಸದಲ್ಲಿ ದಿನಾಂಕ 07-12-1988 ರಿಂದ ಖಾಲಿ ಇರುತ್ತದೆ.

ಆ) ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಜೇಷ್ಠತಾಪಟ್ಟಿಯ ಮೇರರೆಗೆ ಉಪನ್ಯಾಸಕರುಗಳಿಗೆ ಪ್ರಾಂಶುಪಾಲರಾಗಿ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

**ವಿದ್ಯಾರ್ಥಿಗಳ ಸಂಖ್ಯೆ ಬಗ್ಗೆ**

2758 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

*ಅ) ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ವಿವಿಧ ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?*

*ಆ) ಮೇಲ್ಕಂಡ ಪ್ರೌಢ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು*

*ಇ) ಶಿಕ್ಷಕರ ಕೊರತೆ ನೀಗಿಸಲು ಕೈಗೊಳ್ಳಲಿರುವ ತತ್‌ಕ್ಷಣದ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

| | |
|---|---|
| 1. ಬಾಲಕರ ಸಂಖ್ಯೆ | 1314 |
| 2. ಬಾಲಕಿಯರ ಸಂಖ್ಯೆ | 795 |
| ಒಟ್ಟು | 2109 |

ಆ) 85

ಇ) ಈ ಬಗ್ಗೆ ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ತಾತ್ಕಾಲಿಕವಾಗಿ ನಿಯೋಜನೆ ಮಾಡಲಾಗಿದೆ.

**ವಿದ್ಯುತ್ ಸರಬರಾಜಿನ ಬಗ್ಗೆ**

2760 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರಕ್ಕೆ ಪೂರೈಕೆಯಾಗುವ ವಿದ್ಯುತ್ತಿನ ದಿನವಹಿ ಪ್ರಮಾಣವೆಷ್ಟು?*

ಆ) *ಈ ವಿದ್ಯುತ್‌ನಲ್ಲಿ ಸಾಮಾನ್ಯ ಗ್ರಾಹಕರು ಸಣ್ಣ ಕೈಗಾರಿಕೆ, ಬೃಹತ್ ಕೈಗಾರಿಕೆ ಬೀದಿ ದೀಪಗಳು ಇವುಗಳಿಗಾಗಿ ಖರ್ಚು ಮಾಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು?*

ಇ) *ಹೈಟೆನ್‌ಷನ್ ಬಳಕೆದಾರರಿಂದ ಬರಬೇಕಾದ ಬಾಕಿಯ ಮೊತ್ತವೆಷ್ಟು? (ರೂ.50,000) ಅಧಿಕ ಬಾಕಿ ಉಳಿಸಿಕೊಂಡ ಉದ್ಯಮಗಳು, ಸಂಸ್ಥೆಗಳ ಹೆಸರುಗಳ ವಿವರಗಳನ್ನೊದಗಿಸುವುದು.*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಬೆಂಗಳೂರು ನಗರಕ್ಕೆ ದಿನವಹಿ ಸರಾಸರಿ 7 ದಶಲಕ್ಷ ಯೂನಿಟ್ಸು ವಿದ್ಯುಚ್ಛಕ್ತಿ ಈಗ ಪೂರೈಕೆಯಾಗುತ್ತಿದೆ.

ಆ) ವಿವರಗಳು ಕೆಳಕಂಡಂತಿವೆ

| ಗ್ರಾಹಕರ ವಿವರಗಳು | ವಿದ್ಯುತ್ ಬಳಕೆಯ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ) |
|---|---|
| ಗೃಹದೀಪ, ಸರ್ವವಿದ್ಯುತ್ ಗೃಹ ಮತ್ತು ವಾಣಿಜ್ಯ ದೀಪಗಳು | 3.2 |
| ಸಣ್ಣ ಕೈಗಾರಿಕೆ | 1.2 |
| ಬೃಹತ್ ಕೈಗಾರಿಕೆ | 2.5 |
| ಬೀದಿ ದೀಪಗಳು | 0.1 |

ಇ) ಈ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ನಂತರ ಒದಗಿಸಲಾಗುವುದು.

**ಅಡ್ವೋಕೇಟ್ ಜನರಲ್ ಕಛೇರಿಯ ಖರ್ಚು ಕುರಿತು**

2757- ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1-10-90 ರಿಂದ 10-8-91ರ ವರೆಗೆ ರಾಜ್ಯದ 'ಅಡ್ವೋಕೇಟ್ ಜನರಲ್' ಕಛೇರಿಯ ಸಿಬ್ಬಂದಿ ವಾಹನ ನಿರ್ವಹಣೆ ಪ್ರವಾಸ ಭತ್ಯೆಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು*

ಆ) *ಮೇಲ್ಕಂಡ ವೆಚ್ಚವು ರಾಜ್ಯದ ಆಕೌಂಟೆಂಟ್ ಜನರಲ್‌ರವರ ಪರಿಶೀಲನೆಯ ವ್ಯಾಪ್ತಿಗೆ ಬರುವುದೇ?*

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :